ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಆದರಲ್ಲೂ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ 1989ರಿಂದ 1992ರವರೆಗೆ ನಿರ್ಮಿತವಾಗಿರುವ ಮನೆಗಳ ಸಂಖ್ಯೆ ಎಷ್ಟು;

ಆ) ಈ ಉದ್ದೇಶಕ್ಕಾಗಿ ಸರ್ಕಾರದಿಂದ ಎಷ್ಟು ಹಣ ಬಿಡುಗಡೆ ಮಾಡಲಾಗಿತ್ತು ಹಾಗೂ ಅದರ ಪೂರ್ಣ ಉಪಯೋಗವಾಗಿದೆಯೇ;

ಇ) ಹಾಗಿದ್ದಲ್ಲಿ, ಅನೇಕ ಕಡೆಗಳಲ್ಲಿ ಮನೆಗಳು ಅಪೂರ್ಣಗೊಂಡಿರಲು ಕಾರಣಗಳೇನು ಹಾಗೂ ಅವುಗಳನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಗೋಪಿನಾಥ ಸಾಂಗ್ರ (ವಸತಿ ಸಚಿವರು):–

ಅ)	ಮಂಜೂರಾದ ಮನೆಗಳು	ಪೂರ್ಣಗೊಂಡ ಮನೆಗಳು	ಪ್ರಗತಿ	ಪ್ರಾರಂಭವಾಗದಿರುವ ಮನೆಗಳು
1989–90	48135	17985	19626	10524
1990–91	22458	1416	3342	17700
	70593	19401	22968	28224

1990–91ರ ಸಾಲಿನ ಮನೆಗಳನ್ನು ಆಶ್ರಯ ಯೋಜನೆಗೆ ವಿಲೀನಗೊಳಿಸಿದ ಪ್ರಯುಕ್ತ ಹುಡ್ಕೋ ಸಾಲ ಬಂದಿರುವುದಿಲ್ಲ. ಆದಾಗ್ಯೂ 10 ಜಿಲ್ಲೆಗಳು ಸರ್ಕಾರ ಬಿಡುಗಡೆ ಮಾಡಿದ ಸಹಾಯ ಧನವನ್ನಾಧರಿಸಿ ಮನೆ ನಿರ್ಮಾಣ ಕೆಲಸ ಕೈಗೆತ್ತಿಕೊಂಡಿರುತ್ತಾರೆ.

ಆ) 1989–90ಮತ್ತು 1990–91ನೇ ಸಾಲಿನ ಮನೆಗಳಿಗೆ ಕ್ರಮವಾಗಿ ರೂ. 1203.37ಹಾಗೂ 743.00 ಲಕ್ಷ ಸಂಪೂರ್ಣ ಸಹಾಯ ಧನ ಸರ್ಕಾರದಿಂದ ಬಿಡುಗಡೆಯಾಗಿದ್ದ ಹುಡ್ಕೋದಿಂದ ರೂ. 879.54 ಲಕ್ಷ ಸಾಲದ ಬಾಬ್ತು ಬಿಡುಗಡೆಯಾಗಿದ್ದು ಅದರಲ್ಲಿ ಕರ್ನಾಟಕ ಗೃಹ ಮಂಡಳಿ ರೂ. 554.84 ಲಕ್ಷ ಜಿಲ್ಲಾ ಪರಿಷತ್ತುಗಳಿಗೆ ಬಿಡುಗಡೆ ಮಾಡಿದೆ.

ಇ) ಹುಡ್ಕೋ ಸಂಸ್ಥೆ ಕರ್ನಾಟಕ ಗೃಹ ಮಂಡಳಿಗೆ ಮನೆಗಳ ಪ್ರಗತಿಯನ್ನಾಧರಿಸಿ ಕಂತಿನ ಹಣವನ್ನು ಬಿಡುಗಡೆ ಮಾಡುತ್ತದೆ. ಪ್ರಗತಿಯಲ್ಲಿರುವ ಮನೆಗಳನ್ನು ಪೂರ್ಣಗೊಳಿಸಲು ಎಲ್ಲಾ ಜಿಲ್ಲಾ ಪರಿಷತ್ತುಗಳಿಗೆ ನಿರ್ದೇಶನ ನೀಡಲಾಗಿದೆ ಹಾಗೂ ಕರ್ನಾಟಕ ಗೃಹ ಮಂಡಳಿಗೆ ಬಿಡುಗಡೆ ಮಾಡಿರುವ ಸಾಲವನ್ನು ತಕ್ಷಣ ಜಿಲ್ಲಾ ಪರಿಷತ್ತುಗಳಿಗೆ ಕೊಡಲು ನಿರ್ದೇಶನ ನೀಡಿದೆ.

ಬ್ಯಾಕ್‌ಲಾಗ್ ನೇಮಕಾತಿ ಬಗ್ಗೆ

382 (250): ಶ್ರೀ ಅಂಜನಾಮೂರ್ತಿ (ನೆಲಮಂಗಲ):–

ಸಮಾಜ ಕಲ್ಯಾಣ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದ ಪ್ರತಿಯೊಂದು ಇಲಾಖೆಯಲ್ಲಿಯೂ ಅದರಲ್ಲಿಯೂ ವಿಶೇಷವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸರ್ಕಾರದ ಆದೇಶದ ಪ್ರಕಾರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರನ್ನು ವಿಶೇಷ ನೇಮಕಾತಿ ಆಡಿಯಲ್ಲಿ ಬಡ್ತಿ ನೀಡುವ ಸಂದರ್ಭದಲ್ಲಿ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಜನಾಂಗದವರನ್ನು ಕಡೆಗಾಣಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಯವರಿಗೆ ಸೂಕ್ತ ಆದೇಶ ನೀಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿ ಸಂಬಂಧಪಟ್ಟ ಅಧಿಕಾರಿಯ ಮೇಲೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ;

ಇ) ಸಂಬಂಧಿಸಿದ ಇಲಾಖೆಯಲ್ಲಿ ಇಲಾಖಾ ಪರೀಕ್ಷೆಯಲ್ಲಿ ನಿಗದಿತ ವೇಳೆಯಲ್ಲಿ (ಅಂದರೆ 1986–87ನೇ ಸಾಲಿನಲ್ಲಿ) ತೇರ್ಗಡೆ ಹೊಂದಿದ್ದರೂ ಸಹ ಮತ್ತು ಬಡ್ತಿಯ ಅಂಚಿನಲ್ಲಿಯೂ ಇದ್ದರೂ ಸಹ ವಿಳಂಬ ನೀತಿಯನ್ನು ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ) ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸರ್ಕಾರದ ಆದೇಶಗಳ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಂದ ವಿವಿಧ ವೃಂದದಲ್ಲಿ ಬಡ್ತಿಯಿಂದ ತುಂಬಬೇಕಾದ ಹುದ್ದೆಗಳಲ್ಲಿ ಈ ವರ್ಗದವರನ್ನು ಕಡೆಗಾಣಿಸಿರುವುದಿಲ್ಲ.

ಆ) ಪ್ರಶ್ನೆ ಸಂಖ್ಯೆ: 'ಅ' ರಲ್ಲಿ ನೀಡಿರುವ ಉತ್ತರದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಯಾವುದೇ ನೀತಿಯ ಅನ್ಯಾಯವಾಗಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಲಾಖೆಯಲ್ಲಿ ಬಡ್ತಿಯನ್ನು ನೀಡುವಲ್ಲಿ ಯಾವುದೇ ವಿಳಂಬ ನೀತಿಯನ್ನು ಅನುಸರಿಸುತ್ತಿಲ್ಲ.

ಈ) (ಅ) ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಬಗ್ಗೆ

383 (251): ಶ್ರೀ ಅಂಜನಮೂರ್ತಿ (ನೆಲಮಂಗಲ):–

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1990 ರಿಂದ ಇಂದಿನವರೆಗೆ ನೆಲಮಂಗಲ ಮತ ಕ್ಷೇತ್ರದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಕೊಳವೆ ಬಾವಿ ತೋಡಿಸಲು ಎಷ್ಟು ಮನವಿ ಅರ್ಜಿ ಬಂದಿದೆ;

ಆ) ಆವುಗಳಲ್ಲಿ ಎಷ್ಟನ್ನು ಕಾರ್ಯಗತಗೊಳಿಸಲಾಗಿದೆ ಹಾಗೂ ಕೊರೆದ ಎಷ್ಟು ಕೊಳವೆ ಬಾವಿಗಳು ವಿಫಲಗೊಂಡಿದೆ;

ಇ) ಪಾಯಿಂಟ್ ಗುರ್ತಿಸುವ ಭೂಗರ್ಭ ತಜ್ಞರಿಂದ ಅವ್ಯವಹಾರ ನಡೆಯುತ್ತಿರುವ ಬಗ್ಗೆ ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಫಲಾನುಭವಿಗಳು ಅನೇಕ ದೂರುಗಳು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಸರ್ಕಾರ ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮಂತ್ರಿಗಳು):–